

# ಉಪಯೋಗಕ್ಕೆ ಬಾರದ ಜಾಣ್ಮೆ

■ ಮಲ್ಲಿಕಾರ್ಜುನ ಎಸ್.ಬಿ.

ಯಮಧರ್ಮರಾಜರ ಆಸ್ಥಾನದ ಕಟಕಟೆಯಲ್ಲಿ ವ್ಯಾಪಾರಿಯೊಬ್ಬನ ವಿಚಾರಣೆ ನಡೆಯುತ್ತಿದೆ. ಚಿತ್ರಗುಪ್ತ ವ್ಯಾಪಾರಿ ಸುಹಾಸನ ಧರ್ಮ–ಅಧರ್ಮ, ಸನ್ನಡತೆ–ದುರ್ನಡತೆ, ವ್ಯವಹಾರ– ಅವ್ಯವಹಾರ, ಸಹಕಾರ–ಅಸಹಕಾರಗಳ ಪಟ್ಟಿಯನ್ನ ಯಮಧರ್ಮರಾಜರಿಗೆ ಓದಿ ಹೇಳುತ್ತಿದ್ದಾನೆ, ನಡುವೆ ಮಾತನಾಡಿದ ಸುಹಾಸ 'ಇಲ್ಲ ಸ್ವಾಮಿ ಚಿತ್ರಗುಪ್ತನ ವರದಿ ಏಕಪಕ್ಷೀಯವಾಗಿದೆ ಒಂದೊಂದಾಗಿ ಹೇಳಲಿ, ನನಗೂ ಮಾತನಾಡಲು ಅವಕಾಶ ಬೇಕು' ಎಂದನು.

'ಅದೂ ಆಗಲಿ' ಎಂದು ಆಜ್ಞಾಪಿಸಿದ ಯಮಧರ್ಮರಾಜ.

ಚಿತ್ರಗುಪ್ತ: ತೂಕದಲ್ಲಿ ಮೋಸ ಮಾಡಿದ್ದಾನೆ.

ಸುಹಾಸ: ಗೋಣಿಚೀಲದ ತೂಕ, ಸೋರಿಕೆಯಾದ ದವಸಧಾನ್ಯಗಳ ತೂಕ ಸರಿದೂಗಿಸಬೇಕಿತ್ತಲ್ಲವೆ.

ಚಿತ್ರಗುಪ್ತ: ಸಾಲ ಬರೆದುಕೊಳ್ಳುವಾಗ ಹೆಚ್ಚಾಗಿ ಬರೆದುಕೊಂಡಿದ್ದಾನೆ.

ಸುಹಾಸ: ಸಾಲ ಪಡೆದವರು ಯಾವಾಗಲೊ ಕೊಡುತ್ತಿದ್ದರು ಅಲ್ಲಿಯವರೆಗೆ ಅಸಲಿಗೆ ಬಡ್ಡಿ ಬೇಡವೆ? ಅಷ್ಟಕ್ಕೂ ದುಡ್ಡಿಲ್ಲದ ಬಡವರಿಗೆ ಉಪಕಾರ ಮಾಡಿದಂತಾಗಲಿಲ್ಲವೆ?

ಚಿತ್ರಗುಪ್ತ: ಸಾಲಗಾರರಿಗೆ ಅವಧಿ ಮುಗಿದ ಸರಕುಗಳ ಮಾರಿದ್ದಾನೆ.

ಸುಹಾಸ: ಬಿಸಾಡಿದರೆ ರೈತರಿಗೆ, ಕಾರ್ಮಿಕರ ಶ್ರಮಕ್ಕೆ ಮೋಸ ಮಾಡಿದಂತಲ್ಲವೆ?

ಚಿತ್ರಗುಪ್ತ: ಒಂದು ದಿನವೂ ದಾನ ಧರ್ಮ ಮಾಡಿದ ಮನುಷ್ಯನಲ್ಲ

ಸುಹಾಸ: ಹಾಗೆ ಮಾಡಿದ್ದರೆ ನಮ್ಮ ಅಂಗಡಿಗೆ ವ್ಯಾಪಾರ ಆಗುತ್ತಿತ್ತೆ?

ಚಿತ್ರಗುಪ್ತ: ತೀರ್ಥಯಾತ್ರೆಯಿರಲಿ ಊರಿನ ದೇವಸ್ಥಾನದ ಹುಂಡಿಗೂ ನಯಾಪೈಸೆ ಹಾಕಿದವನಲ್ಲ.

ಸುಹಾಸ: ದೇವರು ನಮಗೆ ಕೊಡಬೇಕು, ನಾವೆ ದೇವರಿಗೆ ಕೊಡುವುದೆಂದರೆ ಅಹಂಕಾರ ಅಲ್ಲವೆ?

ಚಿತ್ರಗುಪ್ತ: ಪೇಟೆಯ ಸಗಟು ವರ್ತಕರಿಗೆ ಸಾಕಷ್ಟು ಸಾಲ ಉಳಿಸಿದ್ದಾನೆ.

ಸುಹಾಸ: ನಾನು ನಮ್ಮೂರಿನ ಬಡವರಿಗೆ ಸಾಲ ಕೊಟ್ಟಿದ್ದೇನಲ್ಲ?

ಈ ಚರ್ಚೆ ಮುಗಿಯುವ ಲಕ್ಷಣಗಳು ಇಲ್ಲವೆಂದು ಅರಿತ ಯಮಧರ್ಮರಾಜ 'ಚಿತ್ರಗುಪ್ತ ಸಾಕುಮಾಡು ಚರ್ಚೆ ಈ ವ್ಯಾಪಾರಿ ಬಹಳ ಜಾಣ್ಮೆಯ ಉತ್ತರ ನೀಡುವುದನ್ನು ಕರಗತ ಮಾಡಿಕೊಂಡಿದ್ದಾನೆ, ಇವನಿಗೆ ನರಕವೊ ಸ್ವರ್ಗವೊ ಹೇಳಿಬಿಡು'

ಚಿತ್ರಗುಪ್ತ: ಈತನ ಅಧರ್ಮ ಶೇಕಡ ತೊಂಬತ್ತು ಧರ್ಮ ಶೇಕಡಾ ಹತ್ತು ಹಾಗಾಗಿ ಇವನಿಗೆ ನರಕವೆ.

ಸುಹಾಸ: ಸ್ವಾಮಿ, ಭೂಲೋಕದಲ್ಲಿ ನಾಲ್ಕು ಜನರಂತೆ ಬಾಳಲು ಮೋಸ ,ವಂಚನೆ,ದಗಲ್ಬಾಜಿ, ಎಲ್ಲವೂ ಇದ್ದರೇನೆ ಅದರಂತೆ ನಾನು ಬಾಳಿದ್ದೇನೆ ಅದರಲ್ಲೇನು ನನ್ನ ಮಹಾಪರಾಧ.

ಯಮಧರ್ಮರಾಜ: 'ಭೂಲೋಕದಲ್ಲಿ ಸಾಧ್ಯವಾದಷ್ಟೂ ಅವುಗಳ ಸುಧಾರಿಸಲೆಂದೆ ಮಾನವ ಜನ್ಮ ನೀಡುವುದು ಅವುಗಳ ಜೊತೆ ಒಪ್ಪಂದ ಮಾಡಿಕೊಂಡರೆ, ಬೆಕ್ಕು ಇಲಿಯನ್ನ ತಿಂದು ಹೊಟ್ಟೆಪಾಡು ಎಂದಂತೆ ಆಗುವುದಿಲ್ಲವೆ? ಹೋಗು ಮುಂದಿನ ಜನ್ಮದಲ್ಲಿಯಾದರೂ ನ್ಯಾಯಸಮ್ಮತವಾಗಿ ಬದುಕು' ಎಂದು ಸುಹಾಸನನ್ನ ನರಕಕ್ಕೆ ಕಳುಹಿಸಿದನು. ಉಪಯೋಗಕ್ಕೆ ಬಾರದ ಜಾಣ್ಮೆಗೆ ಸುಹಾಸ ಮನದಲ್ಲೆ ಮರುಗಿದನು. ■